## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಶ್ರೀ ಎಲ್. ನಾಗರಾಜು, ಅಪರ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಪ್ರತಿ ನಿಯೋಜನೆ ಮೇರೆಗೆ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ತೆಂಗಿನ ನಾರಿನ ಸಹಕಾರ ಮಹಾಮಂಡಳಿ, ಬೆಂಗಳೂರು ಇವರ ಪ್ರತಿನಿಯೋಜನಾ ಷರತ್ತು ಮತ್ತು ನಿಬಂಧನೆಗಳು.

ಓದಲಾಗಿದೆ:-
1. ಸರ್ಕಾರದ ಅಧಿಸೂಚನೆ ಸಂಖ್ಯೆ: ವಾಕೈ 126 ಕೈಸೇಪಿ 2024, ದಿನಾಂಕ: 09.08.2024.
2. ಅಪರ ನಿರ್ದೇಶಕರು (ಆಡಳಿತ), ಕೈಗಾರಿಕೆ ಮತ್ತು ವಾಣಿಜ್ಯ ನಿರ್ದೇಶನಾಲಯ, ಬೆಂಗಳೂರು ಇವರ ಪತ್ರದ ಸಂಖ್ಯೆ: DIC-LMI0ADM/60/2023-E-1048184, ದಿನಾಂಕ:30.08.2024.

**ಸರ್ಕಾರದ ಆದೇಶ ಸಂಖ್ಯೆ: ವಾಕೈ 252 ಕೈಸೇಪಿ 2024, ಬೆಂಗಳೂರು, ದಿನಾಂಕ: 30.11.2024**

ಮೇಲೆ ಓದಲಾದ (1)ರ ಸರ್ಕಾರದ ಅಧಿಸೂಚನೆಯಲ್ಲಿ ಶ್ರೀ ಎಲ್. ನಾಗರಾಜು, ಅಪರ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಇವರನ್ನು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ತೆಂಗಿನ ನಾರಿನ ಸಹಕಾರ ಮಹಾಮಂಡಳಿ, ಬೆಂಗಳೂರು ಹುದ್ದೆಗೆ ಪ್ರತಿ ನಿಯೋಜಿಸಲಾಗಿರುತ್ತದೆ. ಅದರಂತೆ, ಸದರಿ ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಿರುವ ಶ್ರೀ ಎಲ್. ನಾಗರಾಜು ರವರ ಪ್ರತಿನಿಯೋಜನೆಯ ಷರತ್ತು ನಿಬಂಧನೆಗಳನ್ನು ಈ ಕೆಳಕಂಡಂತೆ ನಿಗದಿಪಡಿಸಲಾಗಿದೆ.

**1) ಪ್ರತಿ ನಿಯೋಜನೆಯ ಅವಧಿ:-** ಶ್ರೀ ಎಲ್. ನಾಗರಾಜು, ಅಪರ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಇವರ ಪ್ರತಿ ನಿಯೋಜನೆಯ ಪ್ರಾರಂಭಿಕ ಅವಧಿಯು ಅವರು ಕರ್ತವ್ಯಕ್ಕೆ ಹಾಜರಾದ ದಿನಾಂಕ:16.08.2024 ರಿಂದ ಎರಡು ವರ್ಷ ಅಥವಾ ಮುಂದಿನ ಆದೇಶದವರೆಗೆ ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಇರುತ್ತದೆ.

**2) ಪ್ರತಿ ನಿಯೋಜನೆಯ ಪ್ರಾರಂಭ ಹಾಗೂ ಮುಕ್ತಾಯದ ಅವಧಿ:-** ಅಧಿಕಾರಿಯವರ ಪ್ರತಿನಿಯೋಜನೆ ಅವಧಿಯು ಸದರಿ ಹುದ್ದೆಯ ಕರ್ತವ್ಯಕ್ಕೆ ಹಾಜರಾದ ದಿನಾಂಕದಿಂದ ಪ್ರಾರಂಭಗೊಂಡು ಹುದ್ದೆಯ ಪ್ರಭಾರವನ್ನು ಹಿಂದಕ್ಕೆ ವಹಿಸಿಕೊಟ್ಟ ದಿನಾಂಕದಂದು ಮುಕ್ತಾಯಗೊಳ್ಳುತ್ತದೆ.

--2

3) ವೇತನ ಮತ್ತು ಇತರೆ ಭತ್ಯೆಗಳು:- ಅಧಿಕಾರಿಯವರ ಪ್ರತಿ ನಿಯೋಜನಾ ಅವಧಿಯಲ್ಲಿ ಅವರ ಮಾತೃ ಇಲಾಖೆಯಲ್ಲಿ ಹೊಂದಿರುವ ಹುದ್ದೆಗೆ ಅನ್ವಯವಾಗುವ ವೇತನ ಶ್ರೇಣಿಯಲ್ಲಿ ಪಡೆಯುತ್ತಿದ್ದ ವೇತನ, ತುಟ್ಟಿಭತ್ಯೆ, ಕಾರ್ಯನಿರ್ವಹಿಸುತ್ತಿರುವ ಸ್ಥಳಕ್ಕೆ ಅನ್ವಯವಾಗುವ ಮನೆ ಬಾಡಿಗೆ ಭತ್ಯೆ, ನಗರ ಪರಿಹಾರ ಭತ್ಯೆ ಪಡೆಯಲು ಅರ್ಹರಿರುತ್ತಾರೆ.

4) ಪ್ರಯಾಣ ಭತ್ಯೆ:- ಸದರಿ ಅಧಿಕಾರಿಯು ಸಾರ್ವಜನಿಕ ಹಿತದೃಷ್ಟಿಯಿಂದ ಪ್ರಯಾಣ ಮಾಡಲೇಬೇಕಾದಲ್ಲಿ ಮಾತ್ರ ಅವರು ಹೊಂದಿರುವ ಹುದ್ದೆಯ ಕಾಲಿಕ ವೇತನ ಶ್ರೇಣಿಯ ಕನಿಷ್ಠ ವೇತನದ ಮೇಲೆ ನಿಯಮಾನುಸಾರವಿರುವ ಪ್ರಯಾಣ ಭತ್ಯೆ ಮತ್ತು ದಿನಭತ್ಯೆಯನ್ನು ಪಡೆಯಲು ಅರ್ಹರಿರುತ್ತಾರೆ.

5) ರಜಾ ನಿಯಮಗಳು:- ಸದರಿ ಅಧಿಕಾರಿಯವರು ಮಾತೃ ಇಲಾಖೆಯಲ್ಲಿಅನುಸರಿಸುವ ರಜಾ ನಿಯಮಗಳಿಗೆ ಅರ್ಹರಿರುತ್ತಾರೆ.

6) ರಜಾ ವೇತನ ವಂತಿಗೆ:- ಅಧಿಕಾರಿಯ ಮೂಲ ವೇತನದ ಶೇ.11 ರಷ್ಟು ರಜಾ ವೇತನ ವಂತಿಗೆಯಾಗಿ ಸರ್ಕಾರವು ಪಾವತಿಸುತ್ತದೆ. ಅಧಿಕಾರಿಯ ನಿಯೋಜನಾ ನೇಮಕಾತಿಯಲ್ಲಿನ ಸಂಪೂರ್ಣ ರಜೆ ಸಂಬಳವನ್ನು ಮಾತೃ ಇಲಾಖೆಯು ಸರ್ಕಾರಕ್ಕೆ ಪಾವತಿಸತಕ್ಕದು.

7) ನಿವೃತ್ತಿ ವೇತನ ವಂತಿಗೆ:- ಅಧಿಕಾರಿಯ ಮೂಲ ವೇತನದ ಎಂಟನೆಯ ಒಂದು ಭಾಗವನ್ನು ನಿವೃತ್ತಿ ವೇತನ ವಂತಿಗೆಯಾಗಿ ಸರ್ಕಾರವು ಪಾವತಿಸುತ್ತದೆ.

8) ಭವಿಷ್ಯನಿಧಿ ವಂತಿಗೆ ಮತ್ತಿತರೆ ವಂತಿಗೆಗಳು:- ಮಾತೃ ಸಂಸ್ಥೆಯಲ್ಲಿ ಅಧಿಕಾರಿಗೆ ಅನ್ವಯಿಸುವ ನಿಯಮಾನುಸಾರದ ಶಾಸನಬದ್ಧ ಕಟಾವಣೆಗಳನ್ನು ಅಧಿಕಾರಿಯ ವಂತಿಗೆಯಾಗಿ ಪ್ರತಿ ತಿಂಗಳಿನ ಸಂಬಳದಲ್ಲಿ ಕಟಾಯಿಸಿ ಅವರ ಮಾತೃ ಇಲಾಖೆಗೆ ಪಾವತಿಸತಕ್ಕದ್ದು.

9) ರಜಾ ಪ್ರಯಾಣ ರಿಯಾಯಿತಿ ಸೌಲಭ್ಯ:- ಅಧಿಕಾರಿಯ ರಜಾ ಪ್ರಯಾಣ ರಿಯಾಯಿತಿ ಸೌಲಭ್ಯವು ಮಾತೃ ಇಲಾಖೆಯಲ್ಲಿನ ನಿಯಮಗಳಿಗನುಸಾರ ನಿಯತಗೊಳ್ಳತಕ್ಕದ್ದು.

10) ವೈದ್ಯಕೀಯ ರಿಯಾಯಿತಿ:- ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಗಳು, 1963 ರನ್ವಯ ವೈದ್ಯಕೀಯ ವೆಚ್ಚವನ್ನು ಪಡೆಯಲು ಅರ್ಹರಿರುತ್ತಾರೆ.

**11)** ಕರ್ನಾಟಕ ರಾಜ್ಯ ತೆಂಗಿನ ನಾರಿನ ಸಹಕಾರ ಮಹಾಮಂಡಳಿ, ಬೆಂಗಳೂರು ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರ ಹುದ್ದೆಗೆ ನಿಗಧಿಪಡಿಸಿರುವ ಕೆಲಸಗಳನ್ನು ಹಾಗೂ ಮೇಲಾಧಿಕಾರಿಗಳು ಕಾಲಕಾಲಕ್ಕೆ ವಹಿಸಿಕೊಡುವ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

**12)** ಕರ್ನಾಟಕ ರಾಜ್ಯ ತೆಂಗಿನ ನಾರಿನ ಸಹಕಾರ ಮಹಾಮಂಡಳಿ, ಬೆಂಗಳೂರು ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರ ಹುದ್ದೆಯ ಕೆಲಸ ಕಾರ್ಯಗಳನ್ನು ಶ್ರದ್ಧಾ ಭಕ್ತಿಯಿಂದ ನಿರ್ವಹಿಸತಕ್ಕದ್ದು ಹಾಗೂ ತಮ್ಮ ಕರ್ತವ್ಯಗಳನ್ನು ನಿರ್ವಹಿಸುವಾಗ ತಿಳಿದು ಬರುವಂತಹ ಕಛೇರಿಯ ಅಧಿಕೃತ ಗೌಪ್ಯ ಮಾಹಿತಿಗಳ ಬಗ್ಗೆ ಕಟ್ಟುನಿಟ್ಟಾಗಿ ಗೌಪ್ಯತೆಯನ್ನು ಕಾಪಾಡತಕ್ಕದ್ದು.

**13)** ಅಧಿಕಾರಿಯ ದುರ್ನಡತೆಯಿಂದ ಸರ್ಕಾರಕ್ಕೆ ಉಂಟಾಗುವ ಯಾವುದೇ ನಷ್ಟಗಳನ್ನು ಭರಿಸಿಕೊಡಲು ಅಧಿಕಾರಿಯು ಬಾಧ್ಯತೆಯುಳ್ಳವರಾಗಿರುತ್ತಾರೆ.

ದಿನಾಂಕ:10.07.1996ರ ಸಂಖ್ಯೆ: ಎಫ್‌ಡಿ 01 ಟಿಎಫ್‌ಪಿ 96ರ ಸರ್ಕಾರಿ ಆದೇಶದನ್ವಯ ಆರ್ಥಿಕ ಇಲಾಖೆಯ ಸಹಮತಿಯನ್ನು ಪೂರ್ವಭಾವಿಸಿ ಈ ಆದೇಶ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಉಮಾದೇವಿ.ಕೆ 30/11
(ಉಮಾದೇವಿ .ಕೆ)
ಸರ್ಕಾರದ ಅಧೀನ ಕಾರ್ಯದರ್ಶಿ,
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ,
(ಸೇವೆಗಳು ಮತ್ತು ಸಮನ್ವಯ)

ಇವರಿಗೆ:

1) ಮಹಾಲೇಖಪಾಲರು (ಲೆಕ್ಕಪತ್ರ) (ಎ ಮತ್ತು ಇ) (ಪರಿಶೋಧನೆ), ಕರ್ನಾಟಕ, ಬೆಂಗಳೂರು
2) ಕೈಗಾರಿಕಾಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ನಿರ್ದೇಶನಾಲಯ, ನಂ.49, 1 ನೇ ಮಹಡಿ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು-01.
3) ಅಪರ ನಿರ್ದೇಶಕರು(ಆಡಳಿತ), ಕೈಗಾರಿಕೆ ಮತ್ತು ವಾಣಿಜ್ಯ ನಿರ್ದೇಶನಾಲಯ, ನಂ.49, 1 ನೇ ಮಹಡಿ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು-01.

4) ಶ್ರೀ ಎಲ್. ನಾಗರಾಜು, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ತೆಂಗಿನ ನಾರಿನ ಸಹಕಾರ ಮಹಾಮಂಡಳಿ, ಬೆಂಗಳೂರು.

5) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ(ಸೇವೆಗಳು-1), ವಿಧಾನಸೌಧ, ಬೆಂಗಳೂರು.

6) ಶಾಖಾ ರಕ್ಷಾ ಕಡತ: ಹೆಚ್ಚುವರಿ ಪ್ರತಿ

ಪ್ರತಿ ಮಾಹಿತಿಗಾಗಿ:

1) ಸರ್ಕಾರದ ಪ್ರಧಾನ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಇವರ ಆಪ್ತ ಕಾರ್ಯದರ್ಶಿ.

2) ಸರ್ಕಾರದ ಉಪ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಇವರ ಆಪ್ತ ಸಹಾಯಕರು.

ಕರ್ನಾಟಕ ಸರ್ಕಾರದ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ಅಧಿಕೃತ ಅಂತರ್ಜಾಲತಾಣ

www.industry.karnataka.gov.in ವೀಕ್ಷಿಸಿ